## ಕಥೆ

ಮದುವೆ ಮಾಡಿಕೊಂಡ ಚನ್ನಬಸಪ್ಪ ತಮ್ಮ ಊರಕಡೆ ಒಂದೇ ಸಲ ಹೋಗಿ ಬಂದವನೇ ವೀರಪ್ಪ ಸೌಕಾರನ ಮಗಳು ಬಸಮ್ಮನ ಆಸೆಯಂತೆ ಇದೇ ಊರಾಗ ಮತ್ತೊಂದು ಭವ್ಯವಾದ ಮನೆ ಕಟ್ಟಿಸಿಕೊಂಡು ಇದ್ದ. ಚನ್ನಬಸಪ್ಪ ತಮ್ಮ ಸೀಮೆ ಕಡೆಯಿಂದ ಬರುವಾಗ ಗೋಣಿ ಚೀಲದಲ್ಲಿ ರೊಕ್ಕವನ್ನು ತುಂಬಿಕೊಂಡು ಬಂದದ್ದಷ್ಟೇ ಅಲ್ಲ ಒಂದು ದೊಡ್ಡ ಪೆಟಾರಿ ತುಂಬ ರೇಶಿಮೆ ಬಟ್ಟೆಗಳು, ಬಂಗಾರದ ಗಟ್ಟಿಗಳು ತಂದಿದ್ದನು.

ಚಂಬಸಪ್ಪನ ಊರಕಡೆಯ ಏನೊಂದೂ ಯಾರಿಗೂ ತಿಳಿದಿಲ್ಲ. ಆತನ ಅಪ್ಪ, ಅಮ್ಮ, ಬಂಧು ಬಳಗ ಬಿಟ್ಟು ಬಂದನೋ, ಇಲ್ಲವೋ ಇದೆ ದೊಡ್ಡ ಸುದ್ದಿಯಾಗಿತ್ತು. ಏನೇ ಇದ್ದರೂ ಚಂಬಸಪ್ಪ– ಬಸಮ್ಮ ಇಬ್ಬರೂ ಆರು ಅಂಕಣದ ಮನೆಯಲ್ಲಿ ರತಿಮನ್ಮಥ ಇದ್ದಂತಿದ್ದರು. ಬಸಮ್ಮ ಎರಡು ಗಂಡು ಮಕ್ಕಳ ತಾಯಿ. ಶಿವರುದ್ರ ಬಸಲಿಂಗ ಸಣ್ಣವರಿದ್ದಾಗಲೇ ಚಂಬಸಪ್ಪ ಬಿಳಿ ಕಾಮಣಿ ಬಂದು ನೆಲ ಹಿಡಿದ. ತೇಲುಗಣ್ಣು ಮೇಲುಗಣ್ಣು ಮಾಡಿ ಕಡ್ಡಿ ಚಾಪೆ ಮೇಲೆ ಮಲಗಿದರೆ ಎದ್ದು ಕುಳಿತು ಒಂದೆರೆಡು ಮಾತು ಆಡಲಾರದಷ್ಟು ನಿತ್ರಾಣವಾದ. ನಾನಿನ್ನು ಬದುಕುವುದು ಸಾಧ್ಯವಿಲ್ಲವೆಂದೆನಿಸಿ "ಏ ಏನಾ ಬಾರ, ಭಯ ಬುಳುಬಾಡ ಅಲ್ಲಿ ಪಡಸಾಲಿ ಆಗೇವುದಾಗ ಗೋಣಿಚೀಲದ ತುಂಬ ರೊಕ್ಕ ಐದಾವ. ಮಕ್ಕಳಿಗೆ ಗುಟ್ಟು ಬಿಟ್ಟು ಕೊಡುಬ್ಯಾಡ. ಇಗಾ ಹಂಗೆ ನಮ್ಮೂರಿಂದ ಬರೋವಾಗ ನಾನು ತಂದ ಪೆಟಾರಿ ತಗದು ನೋಡು, ರೇಷ್ಮೆ ಸೀರೆಗಳು ಬಂಗಾರದ ಗಟ್ಟಿಗಳು ಐದಾವ" ಎನ್ನುತ್ತಾ ಬಸಮ್ಮನನ್ನು ಒಮ್ಮೆ ಚಂಬಸಪ್ಪ ಕಣ್ತುಂಬ ನೋಡಿದ. ಬಸಮ್ಮ ಅಂದರೆ ಪ್ರಾಣ ಇಟಗೊಂಡಿದ್ದ. "ಬಿಳೇ ಕಾಮಣಿ ಅಂಬೋದು ಕೆಟ್ಟ ಸುಳೇಮಗಂದಪ. ಜಲ್ದಿ ಕಮ್ಮಿ ಆಗಕಲ್ಲ. ಸುಡುಗಾಡು ರೋಗ. ಏನ್ ಬ್ಯಾನೆನೋ ಏನೋ ತಟಗನ್ನ ಗೊತ್ತಾಗದಲ್ಲ. ಪಾಪ ಚಂಬಸಪ್ಪ ಇದರಾಗ ಮೆತ್ತಗಾದ, ಮಕ್ಳು ಎಲ್ಲ ಸಣ್ಣವು." ಎನ್ನುತ್ತಲೇ ಮನೆ ಮುಂದಿನ ಕಟ್ಟೆಗೆ ಕುಳಿತುಕೊಂಡು ಜನ ಮಾತಾಡೋದು ಕಿವಿಗೆ ಮುಂಜಣ ಬಡಿದಂತಾಗಿ ಚಂಬಸಪ್ಪನಿಗೆ ಬದುಕುವ ಭರವಸೆ ಮತ್ತೆ ಕ್ಷೀಣಿಸಿತು. "ಇವನಮ್ಮನ ಈ ಸುಡುಗಾಡು ಬ್ಯಾನೆ ಅಂಬ್ರಿಕಂಡ್ ಮೇಲೆ ಬಾಯಂಬದು ಝುಡ್ ಇಡದತೆ. ಸಪ್ಪಂದು ತಿಂದೂ ತಿಂದೂ ಮನಿಶೇನಿಗೆ ಸಗತಿಲ್ಲದಂಗ ಆಗಿ ಬದುಕು ಚಿದುಗೆದ್ದತೆ. ಇನ್ನೇಸ್ ದಿನಂತ ಪತ್ತೇವು ಇರಬೋಕೋ ಶಿವನೇ" ಅಂತ ಕೂಗಿದ ಚಂಬಸಪ್ಪ. ಕಾಮಣಿ ಬಂದು ಮೂರು ತಿಂಗಳಾದರೂ ಕಟ್ಟುಮಸ್ತಾಗಿದ್ದ ಚಂಬಸಪ್ಪನಿಗೆ ಗೊತ್ತಾಗಿರಲಿಲ್ಲ. ಒಳಗ ಬಿಳಿಕಾಮಣಿಯಿದ್ದರೂ ತೊಲೆ ತುಂಡಿನಂತಿದ್ದ ಮನುಷ್ಯ. ಹಾಸಿಗೆ ಪತ್ತೇವು ಇರಲಿಲ್ಲ. ಬಸಮ್ಮ ಕಂಡರೆ ಸಾಕು ಮೈಯೆಲ್ಲ ಝುಂ ಅಂತಿತ್ತು. ಬಸಮ್ಮನೂ ಚಂಬಸಪ್ಪಗ ತಕ್ಕ ಜೋಡಿಯೇ. ಆಕೆಯನ್ನು ನೋಡಿದಷ್ಟೂ ತೀರದ ಆಸೆ. ನಿತ್ಯವೂ ತೋರುಂಬ ಸುಖ. ಚಂಬಸಪ್ಪ ತನ್ನ ಹೆಂಡತಿಯನ್ನು ಎವೆ ನಿಲ್ಲಿಸದೆ ನೋಡುತ್ತಿದ್ದ. "ಏಯ್ ಸುಮ್ಮಿಕಿರ್‌ತೀಯಾ ಇಲ್ಲ. ನಾನೇನು ವಸ್ತಾಗಿ ಬಂದಿನೇನು. ಕಡಕಂಡ್ ತಿಂಬಾತ ನೋಡಿದಂಗ ನೋಡುತುಯಿ. ರೆಪ್ಪೆ ಬಡಿ" ಅಂತ ಚಟಾಕಿ ಹಾರಿಸಿ ನಗೆಸುತ್ತಿದ್ದಳು ಗಂಡನನ್ನ.

ಬಸಮ್ಮ ನಿಜವಾಗಲೂ ಅಪರೂಪದ ಗೊಂಬೆ. ಊರಾಗ ಗೌರುಣುವಿ ಬಂತಂದ್ರೆ ಓಣಿ ಓಣಿಗೂ ರಂಬೆಯರೇ, ಇದರಲ್ಲಿ ಪ್ರತಿರಂಬೆ ಎಂದರೆ ಬಸಮ್ಮ. ಬಸಮ್ಮ ಕೊರಳಾಗ ಬಂಗಾರದ ತಾಳಿಸರ, ಅವರಮ್ಮ ಸಾಯುವ ಕೆಲವೇ ತಿಂಗಳ ಮುಂಚೆ "ಪುಳ್ಳಿ ಮೈನೆರತಾಳ ಎಲ್ಡೆಳೆ ಅವಲಕ್ಕಿ ಸರ ಅಕ್ಕೆಬೇಕು" ಅಂತ ಖುದ್ದು ತಾನೇ ಅಕ್ಷಲ್ಲ ಮಲ್ಲಿಕಾರ್ಜುನಪ್ಪನ ಕಡೆ ಹೋಗಿ ತಮ್ಮ ತವರು ಮನೆಯವರು ಕೊಟ್ಟಿದ್ದ ಎರಡು ಬಂಗಾರದ ಬಳೆ ಮುರೆಕುಡಿಸಿ ಚೆಂದಾದ ಅವಲಕ್ಕಿ ಎಳೆ ಮಾಡಿಸಿ ಬಸಮ್ಮಗ ಹಾಕಿದ್ದಳು. ಹಾಗೆ ಬಸಮ್ಮನ ಮೂಗುಬೊಟ್ಟು ಬಲು ಚಿತ್ತಾರದ್ದು. ಸೌಂದರ್ಯಕ್ಕೆ ಸಮನಾದಷ್ಟು ಅಗಲವಾದ ಎರಡೂ ಕಿವಿಗಳಿಗೆ ಬೆಂಡಾಲಿ, ಬುಗುಡೆ ಕಡ್ಡಿ, ತಾಲಕ್ಕು ಕಡ್ಡಿ, ಪಿಲ್ಲೇ, ಇವಿಷ್ಟು ಹಾಕಿಕೊಂಡು ತುಂಬಿದ್ದಲ್ಲದೇ ಕಿವಿಮೇಲಿಂದ ಕಿವಿ ಆಲಿಯವರೆಗೆ ಮಾಟೀಲು ಹಾಕಿಕೊಂಡಿದ್ದಳು. ಕೊರಳಾಗ ಅಪ್ಪಕೊಟ್ಟಿದ್ದ ಬೋರುಮಳ ಸರ ಕಾಂತಿತುಂಬಿಕೊಂಡು ಹೊಳೀತಿತ್ತು. ಕೈತುಂಬ ಹಸುರು ಬಳೆ, ಈ ಬಳೆ ಅಲುಗಾಡದಂತೆ ಆ ಕಡೆ ಈಡೆ ಬಂಗಾರದ ಬಳೆ. ಕಾಲು ಬೆರಳಿಗೆ ಕಾಲುಸುತ್ತು, ಪಿಲ್ಲೆಯುಂಗುರು. ಗಂಡ ಚಂಬಸಪ್ಪ , ಬಸಮ್ಮಗಂತಾ ಒಪ್ಪುವ ಕೆಂಪು ದಡಿಯ ಆನಂದಕಲರಿನ ಸೀರೆ ತಂದಿದ್ದನ್ನು ನಿರಿಗಿ ಮಾಡಿ ಉಟ್ಗೊಂಡು ಬಾಳೆಕಾಯಿ ತರಾ ಸಿಗಿಸಿಕೊಂಡು ಅದರ ಮೇಲೆ